ಹೊಲಿಗೆ ತರಬೇತಿ ಪಡೆಯಲು ಮೇರಿಯಮ್ಮನ ಮನೆಗೆ ಬರುವಂತೆ ಆಯಿತು. ದಿನಪೂರ್ತಿ ಇವರು ಪ್ರಾರ್ಥನೆಗೆ ಕುಳಿತಾಗ ಅವೂ ಕೂರುವುದು, ಹೂವು, ಕುಂಕುಮದ ಮೇಲೆ ಸಾಂದರ್ಭಿಕ ವೈರಾಗ್ಯ ತಾಳುವುದು ಇತ್ಯಾದಿ ನಡೆದೇ ಇತ್ತು. ಇದೇ ಸುಸಂದರ್ಭದಲ್ಲಿ ಆಂಥೋನಿ ಮತ್ತು ಮೇರಿಯ ಒಬ್ಬಳೇ ಮಗಳಾದ ವೆಟರ್ನರಿ ಡಾಕ್ಟರ್ ಫೆರಾರಿ ಹಿರಿಯೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನಿಶಿಯನ್ ಕಮ್ ಶಾಲೂಮ್ ಫಾಸ್ಟರ್ ಆಗಿರುವ ಹ್ಯಾರಿ, ಹಾರ ಬದಲಾಯಿಸಿಕೊಂಡರು.

ಡಾಕ್ಟರ್ ಫೆರಾರಿಗೆ ಅಷ್ಟು ಸುಲಭಕ್ಕೆ ಗಂಡನೂರಿನ ದನದ ಆಸ್ಪತ್ರೆಗೆ ವರ್ಗಾವಣೆ ಆಗದೆ ಇದ್ದಾಗ, ಫಾಸ್ಟರ್ ಹ್ಯಾರಿಯೇ ಹೆಂಡತಿ ಊರಿನಲ್ಲಿ ವಾರಕ್ಕೆ ಮೂರುದಿನ ತಂಗುವಂತೆ ಸಮಯ ನಿಗದಿಪಡಿಸಿಕೊಂಡ. ಪೂರ್ತಿ ಇಲ್ಲೆ ಸಮಯ ಕಳೆಯಲು ಸಾಧ್ಯವಾಗುತ್ತಿರಲಿಲ್ಲ. ಯಾಕೆಂದರೆ, ಹಿರಿಯೂರಿನ ಶಾಲೂಮ್ ಪ್ರಾರ್ಥನಾ ಮಂದಿರಕ್ಕೆ ಬರುವ ಅನುಯಾಯಿಗಳ ಸಂಖ್ಯೆ ಹೆಚ್ಚೇ ಇತ್ತು. ಹ್ಯಾರಿಯವರು ಇಲ್ಲಿ ವಾರಕ್ಕೆ ಮೂರುದಿನ ತಂಗುತ್ತಿದ್ದುದು ಸ್ಥಳೀಯ ಕ್ರಿಸ್ತಾನುಯಾಯಿಗಳಿಗೆ ಒಂದು ಬಗೆಯ ಅನುಕೂಲವೇ ಆಯಿತು. ಇಲ್ಲಿ ತಂಗಿದಷ್ಟು ಕಾಲ ಬರುವವರಿಗೆ ಪ್ರಾರ್ಥನೆ ಮಾಡಿಸುವುದು, ರಕ್ಷಣೆ ಒದಗಿಸುವುದು ಹ್ಯಾರಿಯವರಿಂದ ನಡೆದೇ ಇತ್ತು. ಕಾಲ ಸರಿದಂತೆ ಅನುಯಾಯಿಗಳ ಬೇಡಿಕೆಗೆ ಅನುಗುಣವಾಗಿ ಪ್ರಾರ್ಥನೆಗೆ ಹಾಗೂ ವಾಸಕ್ಕೆ ಸುಸಜ್ಜಿತ ಎನಿಸುವ ದೊಡ್ಡದಾದ ಮನೆಯನ್ನೇ ಲೀಜಿಗೆ ಪಡೆದು ಆರಾಧಿಸಲು ರಹದಾರಿ ಮಾಡಿಕೊಂಡರು. ಅಷ್ಟರಲ್ಲಾಗಲೇ ಮೇರಿಯಮ್ಮನವರಿಂದ ಟೈಲರಿಂಗ್ ತರಬೇತಿ ಪಡೆದು ಸ್ವಂತ ಕಾಲ ಮೇಲೆ ನಿಂತು ದುಡಿಮೆ ಪ್ರಾರಂಭಿಸಿದ ಅದೆಷ್ಟೋ ಹೆಣ್ಣುಮಕ್ಕಳು ತಮ್ಮ ಮನೆ ಹಾಗೂ ಅಂಗಡಿಗಳಲ್ಲಿ ತಮ್ಮ ಇತರ ದೇವರುಗಳ ಜೊತೆಗೆ ಏಸುವನ್ನು ಹಾಕಿಕೊಂಡು ನ್ಯಾಯ ಸಲ್ಲಿಸುವುದು ನಡೆದೇ ಇತ್ತು. ಆಂಥೋನಿಯ ಮೂಲ ಸ್ಥಳವಾದ ಬೆಂಕಿಪುರದಲ್ಲೂ ಇದು ಮುಂದುವರೆದಿತ್ತು.

ಬೆಂಕಿಪುರದೊಂದಿಗಿನ ನಂಟು ಮೇರಿಗಾಗಲೀ ಆಂಥೋನಿಗಾಗಲೀ ಬೇಡವಾಗಿದ್ದರೂ ಬೆಂಕಿಪುರದ ಈಗಿನ ತಲೆಮಾರಿನವರಿಗೆ ಅಳಿಯ ಹ್ಯಾರಿ ಹಾಗೂ ಫೆರಾರಿಯ ಸೇವೆ ಬೇಕೆನಿಸಿದ್ದರಲ್ಲಿ ಆಶ್ಚರ್ಯವೇನಿರಲಿಲ್ಲ. ನಿಮಿತ್ತವಾಗಿ ಫೆರಾರಿ ಹಾಗೂ ಹ್ಯಾರಿ ದಂಪತಿ ಬೆಂಕಿಪುರ ಕಾಲೋನಿಯವರು ಕರೆದಾಗ ಬಂದು ಪ್ರಾರ್ಥನೆ ಸಲ್ಲಿಸುವುದು, ಅವರಿಗೆ ದೇವರ ರಕ್ಷಣೆ ಒದಗಿಸುವುದು ನಡದೇ ಇತ್ತು. ಇದರ ಭಾಗವಾಗಿಯೇ ಕಾಲೋನಿಯ ರಂಗ ತಾನು ಹಿಂದೆ ಮಾಡುತ್ತಿದ್ದ ಕೂಲಿ ಕೆಲಸವನ್ನು ಬಿಟ್ಟು, ಅಂಗಡಿಯೊಂದನ್ನು ಹಾಕಿಕೊಂಡು, ತಾನು ಕಲಿತಿದ್ದ ವಿದ್ಯೆಗೆ ಅನುಗುಣವಾಗಿ ಮೊಬೈಲ್‌ಗೆ ಕರೆನ್ಸಿ ಹಾಕುವುದು, ಓದುವ ಮಕ್ಕಳ ಅರ್ಜಿಗಳನ್ನು ಮೊಬೈಲ್‌ನಲ್ಲೆ ತುಂಬುವುದು ಇತ್ಯಾದಿ ಮಾಡತೊಡಗಿದ್ದ. ಕಾಲೋನಿಯ ಮಧ್ಯದಲ್ಲೇ ಮನೆಗೆ ಹೊಂದಿಕೊಂಡಂತೆಯೇ ಇದ್ದ ರಂಗನ ಆಧುನಿಕ ಅಂಗಡಿಗೆ 'ಕರುಣಾಳು ಸೇವಾಕೇಂದ್ರ' ಎಂದೇ ಹೆಸರಿಟ್ಟಿದ್ದ. ಹ್ಯಾರಿ ದಂಪತಿ ಪ್ರೇಯರ್‌ಗೆಂದು ಬಂದವರು ಒಮ್ಮೊಮ್ಮೆ ತಡವಾದರೆ ರಂಗನ ಅಂಗಡಿ ಕಮ್ ಪ್ರಾರ್ಥನಾ ಮಂದಿರದಲ್ಲೇ ತಂಗಿ ಬೆಳಗ್ಗೆ ಎದ್ದು ಹೋಗುತ್ತಿದ್ದರು. ಇಲ್ಲಿಂದ ಶುರುವಾದ ಸಂಬಂಧಗಳ ಮರುಜೇಣಿಗೆ ಅರ್ಧದಷ್ಟು ಕಾಲೋನಿಗೆ ಆವರಿಸಿ ಕಾಲೋನಿಯ ಬಹುತೇಕ ಹೆಂಗಸರ ಹಣೆಗಳು ಕುಂಕುಮ ತ್ಯಜಿಸಿದರೆ, ಜಡೆಗಳು ಹೂವು ಕಾಣದಾದವು. ನಿಕ್ಕರ್ ತೊಡುತ್ತಿದ್ದ ಗಂಡಸರು ದಿಢೀರ್ ಪ್ಯಾಂಟ್ ತೊಡುವಂತಾಗಿ, ಊರೊಳ್ಳರು ಕೆಲಸಕ್ಕೆ ಕರೆದರೆ, 'ಇಲ್ಲ ಕಣ್ರಿ, ಟೌನ್‌ಗೆ ಕೆಲ್ಸಕ್ಕೆ ಹೋಗ್ತಿದಿನಿ ಬರಕಾಗಲ್ಲ' ಎನ್ನುವಷ್ಟರ ಮಟ್ಟಿಗೆ ಬದಲಾವಣೆಗೊಳಪಟ್ಟಿತು. ಈ ರೀತಿಯಲ್ಲಿ ಹಟ್ಟಿಯಲ್ಲಿ ಉಂಟಾದ ಬದಲಾವಣೆ ಪಂಚೇಗೌಡರ ಮಗ ಮಂಜೇಗೌಡರಿಗೆ ಹಿಡಿಸದಾಗಿ ಅವರ ಅಸಮಾಧಾನಕ್ಕೆ ಕಾರಣವಾಗಿತ್ತು. ಇದನ್ನ ಹೀಗೆ ಬಿಟ್ಟರೆ ಹಟ್ಟಿ ಇನ್ನೆಂದೂ ಹಿಡಿತಕ್ಕೆ ಸಿಗದಂತಾಗಿಬಿಡುತ್ತದೆ ಎಂಬ ಎಚ್ಚರಿಕೆ ಅವರದಾಗಿತ್ತು.

ಕಾಲೋನಿಯಲ್ಲೂ ಎರಡು ಭಾಗವಿದ್ದು, ವೆಂಕಟ್ರಮಣಸ್ವಾಮಿ ಒಕ್ಕಲಿನ ಶೆಟ್ಟರೆಲ್ಲರು ಬೆಡಗಿನವರು